ಶ್ರೀ ಎಂ. ಬಿ. ರಾಮಸ್ವಾಮಿ.—ಖಾಸಗಿ ಶಾಲೆಗಳ ಮ್ಯಾನೇಜ್‌ಮೆಂಟನ್ನು ಅವರವರೇ ನಡೆಸಿಕೊಂಡಿದ್ದಾರೆ. ಸರ್ಕಾರದಿಂದ 75 ಪರ್ಸೆಂಟ್ ಗ್ರಾಂಟುಕೊಡುತ್ತಿರುವುದರಿಂದ ಸರ್ಕಾರದ ಪರವಾಗಿ ಯಾರಾದರೂ ಒಬ್ಬ ಪ್ರತಿನಿಧಿ ಇರುವುದು ಸೂಕ್ತವಲ್ಲವೇ ?

ಶ್ರೀ ಎ. ಆರ್. ಬದರೀನಾರಾಯಣ್.—ಆ ವಿಚಾರವನ್ನು ಪರಿಶೀಲನೆ ಮಾಡಬಹುದು.

ಶ್ರೀ ಎ. ಎಂ. ಬೆಳ್ಳಿಯಪ್ಪ.—ಬೆಂಗಳೂರಿನ ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಕಳೆದ ವರ್ಷ ಓದುತ್ತಿದ್ದ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಈ ವರ್ಷ ಸೀಟು ಕೊಡುವುದಿಲ್ಲ, ಸರ್ಕಾರಿ ಕಾಲೇಜುಗಳಿಗೆ ಹೋಗಿ ಎಂದು ಕಳುಹಿಸುತ್ತಿದ್ದಾರೆಂದು ತಿಳಿದುಬಂದಿದೆ. ಈ ಬಗ್ಗೆ ಸರ್ಕಾರದವರು ವಿಚಾರ ಮಾಡುತ್ತಾರೆಯೇ ?

ಶ್ರೀ ಎ. ಆರ್. ಬದರೀನಾರಾಯಣ್.—ದೂರುಗಳೇನಾದರೂ ಬಂದರೆ ಅದನ್ನು ಜಾಗ್ರತೆ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರದವರೇ ಒಂದಕ್ಕೆ ಎರಡರಷ್ಟು ಫೀಸು ತೆಗೆದುಕೊಳ್ಳಿ ಬೇಕು ಎಂದು ಖಾಸಗಿ ಶಾಲೆಗಳಿಗೆ ಅವಕಾಶ ಕೊಟ್ಟಿದ್ದಾರೆ, ಹೊರಗಡೆ ಅಧ್ಯಾಪಕರು ಕೂತಿದ್ದಾರೆ, ಅವರಬಗ್ಗೆ ಏನು ಹೇಳುತ್ತೀರಿ ?

[No Answer]

Acquisition of Land in Kenchikoppa Village

322. **Sri HANJI SIVANNA** (Tarikere).—

Will the Minister for Revenue be pleased to state:—

(*a*) whether it is a fact that the papers were prepared by Lakkavalli Panchayat for acquiring 1 acre and 10 Guntas of land in S. No. 18 Kenchikoppa Village of Lakkavalli in Tarikere Taluk ;

(*b*) whether it is a fact that the land owner had also consented to give the land ;

(*c*) whether it is a fact that the said land has been sold purposely to some others recently ;

(*d*) the steps taken by the Government to get the lands released?

Sri N. HUTCHAMASTHY GOWDA (Minister for Revenue)—

(*a*) Yes.

(*b*) It is seen from the report of the Tahsildar that the Khatedar had consented for giving possession of his lands in the presence of Tahsildar.

(*c*) It is reported that 3 acres of land in S. No. 18 has been sold on 15th May 1967.

(*d*) As per rules under the land Acquisition Act separate action has been taken to acquire land for construction of houses for Harijans.

ಶ್ರೀ ಜಿ. ಪುಟ್ಟಸ್ವಾಮಿ.—ತಾವು ಉತ್ತರದಲ್ಲಿ 24—8—1956ರಲ್ಲಿ ಭೂ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಒಪ್ಪಿಗೆ ನೀಡಿದ್ದುದಾಗಿ ತಹಸೀಲ್ದಾರರ ವರದಿಯಿಂದ ವ್ಯಕ್ತಪಡುತ್ತದೆ ಎಂದು ಹೇಳಿದ್ದೀರಿ. ಇಷ್ಟು ಸಾವಕಾಶವಾಗಿ ಅಕ್ವಿಜಿಷನ್ ಮಾಡುವುದಕ್ಕೆ ಕಾರಣ ಏನು ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನು ಅಕ್ವೈರ್ ಮಾಡಿಕೊಳ್ಳಬೇಕು ಎಂದು ಆಗ ಪ್ರಯತ್ನ ಮಾಡಿದ್ದು ನಿಜ. ಆದರೆ ಆ ಭೂಮಿಯ ವಿಸ್ತೀರ್ಣ ಒಂದು ಎಕರೆ 10 ಗುಂಟೆಯುಳ್ಳ ಸುಮಾರು 30 ಗುಂಟೆಯಷ್ಟು ನೀರಾವರಿ ಪ್ರದೇಶವಿತ್ತು. ಅದನ್ನು ಬಿಟ್ಟು ಆ ಸರ್ವೆ ನಂಬರ ಮೇಲು ಭಾಗದಲ್ಲಿ, ಹರಿಜನರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದೇವೆ. ಆದ್ದರಿಂದ ಆ ಭಾಗವನ್ನು ಬಿಡಬೇಕಾಗಿ ಬಂತು 4—8—1970ರಲ್ಲಿ ಹಿಂದಿದ್ದ ಅಕ್ವಿಜಿಷನ್ ಆರ್ಡರ್ ಕ್ಯಾನ್ಸಲ್ ಮಾಡಿ ಹೊಸದಾಗಿ ಎತ್ತರದಲ್ಲಿರತಕ್ಕ ಜಮೀನನ್ನು ಅಕ್ವಿಜಿಷನ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ, ಜನರ ವಾಸಕ್ಕೆ ಆ ಪ್ರದೇಶ ಚೆನ್ನಾಗಿದೆ ಎಂದು ಸರ್ಕಾರದ ಗಮನಕ್ಕೆ ಬಂದು ಅದನ್ನು ಮುಂಚೆಯೇ ಅಕ್ವೈರ್ ಮಾಡಿದ್ದು ಯಾವಾಗ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲು ಅಕ್ವೈರ್ ಮಾಡಿಕೊಳ್ಳಬೇಕಾದ ಪ್ರದೇಶ ಚೆನ್ನಾಗಿ ಇತ್ತು. ಇತ್ತೀಚೆಗೆ ಆ ಪ್ರದೇಶದಲ್ಲಿ ನಾರೆ ಬಂದು 30 ಗುಂಟೆಯಷ್ಟು ಭಾಗ ಮನೆ ಕಟ್ಟಿಕೊಳ್ಳುವುದಕ್ಕೆ ರಾಯಕ್ ಇಲ್ಲ ಎಂದು ಯಾರಿಗೋಸ್ಕರ ಕೊಡಬೇಕೆಂದು ಮಾಡಿದ್ದೆವೋ ಅವರು ಎತ್ತರದಲ್ಲಿರತಕ್ಕ ಜಾಗವಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅಸೆ ವ್ಯಕ್ತಪಡಿಸಿದ್ದರಿಂದ, ಈ ಬದಲಾವಣೆಗೆ ಕಾರಣವಾಯಿತು.

Sri M. MALLAPPA.—I want to know when actually the acquisition proceedings were started ? According to the Hon. Minister, the Khatedar has consented for the acquisition in the year 1967 itself. The Hon. Minister has replied in the year 1970 that some portion has been eliminated and for the other portion action has been taken for acquisition. That time the Government intends to take for completion of the acquisition and take possession of the land for the purpose for which it is going to be acquired.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಉತ್ತರದಲ್ಲಿ ತಿಳಿಸಿದ್ದೇನೆ, ಮೊಟ್ಟಮೊದಲು ಅಕ್ವಿಜಿಷನ್ ಪ್ರಾರಂಭವಾಡಿದ್ದು 24—8—1956ರಲ್ಲಿ. ಆದರೆ ಯಾರಿಗೋಸ್ಕರ ಅಕ್ವೈರ್ ಮಾಡಿಕೊಂಡಿದ್ದೆವೋ ಅವರು ಮಧ್ಯ ಜಮೀನಿನಲ್ಲಿ ಕೆಲವು ಭಾಗ ಗದ್ದೆ ಇದ್ದುದರಿಂದ ಅದು ಬೇಕಿಲ್ಲ, ಎತ್ತರದಲ್ಲಿರತಕ್ಕ ಪ್ರದೇಶದ ಜಮೀನು ಬೇಕು ಎಂದು ಆಸೆ ವ್ಯಕ್ತಪಡಿಸಿದ್ದರಿಂದ, 30 ಗುಂಟೆ ತರಿ ಇರುವುದನ್ನು ಬಿಟ್ಟು ಆ ಸರ್ವೆ ನಂಬರು ಮೇಲ್ಭಾಗವನ್ನು ಅಕ್ವೈರ್ ಮಾಡಿಕೊಳ್ಳಬೇಕೆಂದು ಪ್ರಯತ್ನ ನಡೆಸಿದ್ದೇವೆ. ಹಿಂದಿದ್ದ ಕ್ರಮವನ್ನು ರದ್ದುಪಡಿಸಿ, ಬೇರೆ ಜಾಗ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಆ ಸರ್ವೆನಂಬರ ಮೇಲ್ಭಾಗವನ್ನು ಅಕ್ವೈರ್ ಮಾಡಿಸಿ ಕೊಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಮಾನ್ಯ ಮಂತ್ರಿಗಳು ಹೇಳುತ್ತಾರೆ, ಅಲ್ಲಿ ಒಂದು ನಾಲೆ ಬಂದ ಕಾರಣ ಖುಷ್ಕಿ ಇದ್ದುದು ತರಿಯಾಗುವುದರಿಂದ ಬದಲಾವಣೆಯಾಯಿತು ಎಂದು, ಆದರೆ ನಿಜವಾದ ವಿಷಯ ಖಾತೇದಾರರಾಗಿರತಕ್ಕವರು ಬೇರೆ ಜಮೀನು ಕೊಡುತ್ತಾರೆ ಎಂದು ಬರೆಸಿಕೊಂಡಿದ್ದರಿಂದ ಆ ರೀತಿ ವ್ಯತ್ಯಾಸ ಮಾಡುವುದಕ್ಕೆ ಕಾರಣವಾಗಿದೆ. ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—30 ಗುಂಟೆ ಗದ್ದೆಯಾಗಿದೆ ಎಂದು ನನಗೆ ಬಂದಿರುವ ವರ್ತಮಾನದ ಪ್ರಕಾರ ಖಚಿತವಾಗಿ ಗೊತ್ತಿದೆ. ತಮ್ಮ ಮಾತಿನಲ್ಲೂ ನತ್ಯ ಇರಬಹುದು.